ಸಿಸಿ ನಂಃ 170/2025
ಸಿ.ಡಬ್ಲೂ 12/ಪಿ.ಡಬ್ಲೂ 7

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 170/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮಂಜುನಾಥ ಹಂಚಿನಮನಿ |
| ತಂದೆಯ ಹೆಸರು | ಃ | ಫಕ್ಕಿರಪ್ಪ |
| ವಯಸ್ಸು | ಃ | 34 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸ ಸ್ಥಳ | ಃ | ಕೇಲಗೇರಿ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 12-12-2025

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಅಪಘಾತದಲ್ಲಿ ಮರಣ ಹೊಂದಿದ ರಮೇಶ ಮತ್ತು ಮರೆವ್ವ ನನ್ನ ಸಂಬಂಧಿಕರಿರುತ್ತಾರೆ . ಈಗ 1 ವರ್ಷದ ಹಿಂದೆ ನಾನು ಮನೆಯಲ್ಲಿರುವಾಗ ಕೇಲಗೇರಿಯ ಸಂಪಿಗೆ ನಗರದ ಮೋರ್ ಮಾಲ್ ಬಳಿ ಅಪಘಾತವಾಗಿರುವುದಾಗಿ ಚಾಸಾ-1 ರವರು ದೂರವಾಣಿಯಲ್ಲಿ ಮಾಹಿತಿ ನೀಡಿದರು . ನಂತರ ನಾನು ಅಪಘಾತ ಸ್ಥಳಕ್ಕೆ ಹೊಗಿ ನೋಡಲಾಗಿ ರಮೇಶ ಮತ್ತು ಮರೆವ್ವ ಸ್ಥಳದಲ್ಲಿ ಮರಣ ಹೊಂದಿದ್ದರು . ರೇಣುಕಾ ಮತ್ತು ಅವರ ಮಕ್ಕಳಿಗೆ ಭಾರಿ ಗಾಯಗಳು ಆಗಿದ್ದವು . ನಂತರ ಗಾಯಾಳುಗಳನ್ನು ಧಾರವಾಡದ ಸಿವಿಲ್ ಆಸ್ಪತ್ರೆಗೆ ದಾಖಲಿಸಿ ನಂತರ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿದೆವು . ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಆಯಿತು ಎಂದು ಹೇಳಲು ಆಗುವುದಿಲ್ಲ . ಪೋಲಿಸರಿಗೆ ಯಾವುದೇ ಹೇಳಿಕೆ ಮತ್ತು ಮರು ಹೇಳಿಕೆ ನೀಡಿಲ್ಲ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 20.10.2024 ರಂದು ಅಪಘಾತ ಆಗಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ **ಎಂದು ಹೇಳುತ್ತಾರೆ** . ನಾನು ಅಪಘಾತ ಸ್ಥಳಕ್ಕೆ ಹೋಗಿ ಗಾಯಗೊಂಡ ರೇಣುಕಾ ಇವರನ್ನು

ಸಿಸಿ ನಂಃ 170/2025
ಸಿ.ಡಬ್ಲೂ 12/ಪಿ.ಡಬ್ಲೂ 7

ವಿಚಾರಿಸಿದಾಗ ಸದರಿಯವರು ಬ್ಯಾಡಗಿಗೆ ಹೋಗುವ ಸಲುವಾಗಿ ಧಾರವಾಡದ ರೈಲ್ವೆ ನಿಲ್ದಾಣಕ್ಕೆ ಹೋಗಲು ರಮೇಶ ಇವರಿಗೆ ಸೇರಿದ ರಿಕ್ಷಾ ನಂಃ ಕೆಎ-25/ಡಿ-3725 ರಲ್ಲಿ ಹೋರಟಿರುವಾಗ ಗೋವಾ ರಸ್ತೆಯ ಸಂಪಿಗೆ ನಗರದ ಬಸ್ ಸ್ಟ್ಯಾಪ್ ಹತ್ತಿರ ಒಬ್ಬ ಟ್ರಕ ಚಾಲಕ ತಮ್ಮ ಎದುರುಗಡೆಯಿಂದ ಕೆಲಗೇರಿ ಕಡೆಗೆ ಅತೀ ವೇಗ ಮತ್ತು ಅಜಾಗರುಕತೆಯಿಂದ ಚಲಾಯಿಸಿಕೊಂಡು ಬಂದು ತಮ್ಮ ರಿಕ್ಷಾಕ್ಕೆ ಡಿಕ್ಕಿಪಡಿಸಿದನು ಎಂದು ತಿಳಿಸಿದರು ಎಂದರೆ ಸರಿ . ನಂತರ ರಸ್ತೆಯಲ್ಲಿ ಹೊರಟಿದ್ದ ಜನರು ಗಾಯಗೊಂಡವರನ್ನು ರಿಕ್ಷಾದಿಂದ ಹೊರ ತೆಗೆದು ನೋಡಲಾಗಿ ರಮೇಶ ಇವರ ತಲೆಯ ಮೇಲೆ ಟ್ರಕ ಹಾದು ಹೋಗಿರುವುದು ಕಂಡು ಬಂತು ಎಂದರೆ ಸರಿ . ಮರೆವ್ವ ಇವರಿಗೆ ತಲೆಗೆ ಭಾರಿ ಪ್ರಮಾಣ ಪೆಟ್ಟಾಗಿ ಸ್ಥಳದಲ್ಲಿಯೇ ಮರಣ ಹೊಂದಿದ್ದರು ಎಂದರೆ ಸರಿ . ಪ್ರಣವ ಇವರಿಗೆ ಬಲವಾದ ಗಾಯವಾಗಿ ಕಾಲು ತುಂಡಾಗಿತ್ತು ಎಂದರೆ ಸರಿ . ಇನ್ನೊಬ್ಬ ಮಗ ಪೃಥ್ವಿ ಇವನ ತಲೆಗೆ ಬಲವಾದ ಪೆಟ್ಟಾಗಿತ್ತು ಎಂದರೆ ಸರಿ . ಅಲ್ಲಿ ಜನ ಸೇರುವುದನ್ನು ನೋಡಿ ಟ್ರಕ ಚಾಲಕ ತನ್ನ ಟ್ರಕನ್ನು ಸ್ಥಳದಲ್ಲಿಯೇ ಬಿಟ್ಟು ಓಡಿ ಹೋಗಿರುವುದಾಗಿ ತಿಳಿಯಿತು ಎಂದರೆ ಸರಿ . ಅಪಘಾತಪಡಿಸಿದ ಟ್ರಕ ನಂಃ ನೋಡಲಾಗಿ ಜಿಎ-06/ಟಿ -9097 ಎಂದು ಇತ್ತು **ಎಂದರೆ ಸರಿಯಲ್ಲ** . ಮಾರನೆ ದಿನ ಪ್ರಣವ ಇವರು ಕಿಮ್ಸ ಆಸ್ಪತ್ರೆಯಲ್ಲಿ ಮರಣ ಹೊಂದಿರುವ ಬಗ್ಗೆ ತಿಳಿಯಿತು ಎಂದರೆ ಸರಿ . ನನ್ನ ಸಮಕ್ಷಮ ಮರೆವ್ವ ಇವರ ಶವಪಂಚನಾಮೆ ಮಾಡಿದರು ಎಂದರೆ ಸರಿ . ಈ ಎಲ್ಲಾ ವಿಷಯವನ್ನು ಪೊಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ . ದಿಃ 28.10.2024 ರಂದು ಪೃಥ್ವಿ ಹಂಚಿನಮನಿ ಇವರು ಮರಣ ಹೊಂದಿರುವ ಬಗ್ಗೆ ಪೊಲಿಸರ ಮುಂದೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿ . ಅಪಘಾತವಾದಾಗ ಸಮಯ ಬೆಃ 4.40 ಆಗಿತ್ತು ಎಂದು ತಿಳಿಯಿತು ಎಂದರೆ ಸರಿ .

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ಸಿಸಿ ನಂಃ 170/2025
ಸಿ.ಡಬ್ಲೂ 12/ಪಿ.ಡಬ್ಲೂ 7

ಅಪಘಾತವನ್ನು ನಾನು ನೋಡಿದ್ದೇನೆ . ಸಾಕ್ಷಿಯು ದೂರವಾಣಿ ಮಾಹಿತಿ ಬಂದ ನಂತರ ಗೊತ್ತಾಯಿತು ಎಂದು ಹೇಳುತ್ತಾರೆ . ಅಪಘಾತವು ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ . ನಾನು ರೇಣುಕಾ ಇವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರುವಿಚಾರಣೆ ಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.